ವರಮಹಾಲಕ್ಷ್ಮಿ ಹಬ್ಬಕ್ಕೆ ಕೆಲವೇ ದಿನಗಳು ಬಾಕಿಯಿವೆ. ಹಬ್ಬದ ತಯಾರಿ ಸಾಗುತ್ತಿದ್ದು, ಲಕ್ಷ್ಮಿಗೆ ಸೀರೆ ಉಡಿಸಲು, ಜೊತೆಗೆ ತಾವೂ ಸೀರೆ ಖರೀದಿಸಲು ಯೋಚಿಸುತ್ತಿರುವ ಮಹಿಳೆಯರಿಗೆ ಈಗ ಸಾಲು ಸಾಲು ಆಯ್ಕೆಗಳೇ ಸಿಗುತ್ತಿವೆ. ಅವುಗಳಲ್ಲಿ, ರೇಷ್ಮೆಯನ್ನೇ ಹೋಲುವಂಥ ‘ಇಮಿಟೇಟಿಂಗ್ ರೇಷ್ಮೆ ಸೀರೆ’ ಅಥವಾ ಕೃತಕ ರೇಷ್ಮೆ ಸೀರೆಗಳು ಸದ್ಯ ಟ್ರೆಂಡ್‌ನಲ್ಲಿವೆ. ಅತ್ಯಾಕರ್ಷಕವಾಗಿರುವ ಈ ನಮೂನೆಯ ಸೀರೆಗಳು ನಾರೀಮಣಿಗಳ ಮನಸ್ಸು ಕದ್ದಿವೆ.

ರೇಷ್ಮೆ ಸೀರೆಯನ್ನು ಮೆಚ್ಚದವರು ಯಾರಿದ್ದಾರೆ? ಉಟ್ಟರೆ ಶ್ರೀಮಂತ ನೋಟ ನೀಡುವಂಥ, ವಿಭಿನ್ನ ಮೆರುಗು ಕೊಡುವಂಥ ಈ ಸೀರೆಗಳ ಚೆಲುವಿಗೆ ಮನಸೋಲದವರೇ ವಿರಳ. ಆದರೆ ರೇಷ್ಮೆ ಸೀರೆ ದುಬಾರಿ ಹಾಗೂ ಅದರ ನಿರ್ವಹಣೆ ಕಷ್ಟ ಎಂಬ ಕಾರಣಕ್ಕೆ ರೇಷ್ಮೆ ಸೀರೆ ಕೊಳ್ಳಲು ಮನಸ್ಸಿದ್ದರೂ ಹಿಂದೇಟು ಹಾಕುವವರು ಹೆಚ್ಚು. ಅಂಥ ಮಹಿಳೆಯರಿಗಾಗಿಯೇ ಈಗ ರೇಷ್ಮೆ ಸೀರೆಯನ್ನು ಅನುಕರಣೆ ಮಾಡಿದಂತಿರುವ ಹಲವು ವಿಧದ ಸೀರೆಗಳು ದೊರೆಯುತ್ತಿವೆ. ರೇಷ್ಮೆಗೆ ಬದಲಿ ಆಯ್ಕೆಗಳು ಸಾಕಷ್ಟು ಸಿಗುತ್ತಿವೆ.

ಥೇಟ್ ರೇಷ್ಮೆ ಸೀರೆಯಂತೆಯೇ ಕಾಣುವ, ಆದರೆ ಅಪ್ಪಟ ರೇಷ್ಮೆಯಿಂದ ತಯಾರಾಗದ ಈ ಸೀರೆಗಳು ಮಹಿಳೆಯರಿಗೆ ರೇಷ್ಮೆ ಸೀರೆಗೊಂದು ಪರ್ಯಾಯದಂತೆ ಕಾಣುತ್ತಿವೆ. ನೋಡಲು ರೇಷ್ಮೆಯ ತದ್ರೂಪದಂತಿರುವ ಈ ಸೀರೆಗಳು ಈಚೆಗೆ ಹೆಚ್ಚಾಗಿ ಮಾರಾಟವಾಗುತ್ತಿವೆ. ಹಬ್ಬ ಹರಿದಿನಗಳಲ್ಲಿ ಉಡುವುದಕ್ಕೆ ಸಾಂಪ್ರದಾಯಿಕ ಎನಿಸುವಂಥ, ಪಾರ್ಟಿ, ಯಾವುದೇ ಸಮಾರಂಭಗಳಿಗೂ ಭರ್ಜರಿಯಾಗಿ ಕಾಣುವಂಥ ಫ್ಯಾನ್ಸಿ ಮಾದರಿಗಳಲ್ಲಿ ಹೊರಬರುತ್ತಿರುವ ಈ ಸೀರೆಗಳು ಯುವತಿಯರ ಕಣ್ಸೆಳೆಯುತ್ತಿವೆ. ಸಾಂಪ್ರದಾಯಿಕತೆಯೊಂದಿಗೆ ಆಧುನಿಕ ವಿನ್ಯಾಸ ಮಿಳಿತಗೊಂಡಿವೆ ಈ ಸೀರೆಗಳು.

ಕೃತಕ ರೇಷ್ಮೆ ಸೀರೆಗಳ ಕಾಲ ‘ಅಚ್ಚ ರೇಷ್ಮೆಯಲ್ಲದೆ ಕೃತಕ ನೂಲು ಅಥವಾ ರೇಷ್ಮೆಯಂಥದೇ ನೋಟ ನೀಡಬಲ್ಲ ನೂಲು ಬಳಸಿ ವಸ್ತ್ರ ತಯಾರಿಸುವುದನ್ನು ‘ಆರ್ಟ್ ಸಿಲ್ಕ್’ ಎಂದು ಕರೆಯಲಾಗುತ್ತದೆ. ಆರ್ಟ್ ಎಂದರೆ ಇಲ್ಲಿ ಕ್ರಿಯಾಶೀಲ ಎಂದರ್ಥವಲ್ಲ. ಆರ್ಟಿಫಿಶಿಯಲ್ ಸಿಲ್ಕ್, ಅರ್ಥಾತ್ ಕೃತಕ ರೇಷ್ಮೆ ಎನ್ನಲಾಗುತ್ತದೆ. ಇದಕ್ಕೆ ‘ಫಾಕ್ಸ್ ಸಿಲ್ಕ್’ (Faux silk) ಎಂಬ ಹೆಸರು ಕೂಡ ಇದೆ. ‘ಇಮಿಟೇಟಿಂಗ್ ಸಿಲ್ಕ್ ಸೀರೆ’ ಅಂದರೆ, ರೇಷ್ಮೆಯನ್ನು ಅನುಕರಣೆ ಮಾಡಿದಂತಿರುವ ಸೀರೆ ಎಂತಲೂ ಕರೆಯಲಾಗುತ್ತದೆ. ಸಾಮಾನ್ಯವಾಗಿ ಸಿಂಥೆಟಿಕ್ ನೂಲು ಅಥವಾ ರೆಯಾನ್‌ನಿಂದ ಈ ಸೀರೆ ವಿನ್ಯಾಸ ಮಾಡಲಾಗುತ್ತದೆ. ಮೇಲ್ನೋಟಕ್ಕೆ ಇದು ರೇಷ್ಮೆಯಂತೆಯೇ ತೋರುತ್ತದೆ. ಬಿದಿರಿನ ವಿಸ್ಕೋಸ್‌ನಿಂದ ತಯಾರಿಸಲಾಗುವ ಸೀರೆ ಕೂಡ ಲಭ್ಯವಿದ್ದು, ಇದಕ್ಕೆ ಬಿದಿರಿನ ರೇಷ್ಮೆ ಎಂದೂ ಕರೆಯಲಾಗುತ್ತದೆ. ಇದು ಕೂಡ ಕೃತಕ ರೇಷ್ಮೆಯಂತೆಯೇ.

ಶುದ್ಧ ರೇಷ್ಮೆ ಬಳಸಿ ತಯಾರಿಸಲಾಗುವ ಬಹುಪಾಲು ಶೈಲಿಯ ಸೀರೆಗಳ ನಕಲು ರೂಪ ಇವು ಎನ್ನಬಹುದು. 1890ರಲ್ಲಿಯೇ ಕೃತಕ ರೇಷ್ಮೆ ಉತ್ಪಾದನೆ ಯಶಸ್ವಿಯಾಗಿತ್ತು. ಸಸ್ಯಾಧಾರಿತ ವಸ್ತುವಿನಿಂದ ಇದನ್ನು ಕಂಡುಕೊಳ್ಳಲಾಗಿತ್ತು. 1924ರಲ್ಲಿ ಅಮೆರಿಕದಲ್ಲಿ ಆ ನೂಲನ್ನು ಅಧಿಕೃತವಾಗಿ ರೆಯಾನ್ ಎಂದು ಕರೆಯಲಾಯಿತು. ಇದೀಗ ರೆಯಾನ್, ಪಾಲಿಯೆಸ್ಟರ್ ಹಾಗೂ ಹತ್ತಿಯ ಮಿಶ್ರಣದೊಂದಿಗೆ ಕೃತಕ ರೇಷ್ಮೆ ಸೀರೆಗಳನ್ನು ತಯಾರಿಸಲಾಗುತ್ತಿದೆ. ರೆಯಾನ್‌ನೊಂದಿಗೆ ಶುದ್ಧ ರೇಷ್ಮೆ ಬಳಸಿ ವಿನ್ಯಾಸಗೊಳಿಸುವ ಸೀರೆಗಳು ಕೂಡ ಪ್ರಸಿದ್ಧಿ ಪಡೆಯುತ್ತಿವೆ. ರೇಷ್ಮೆಗೆ ಕನ್ನಡಿ ಹಿಡಿದಂತೆ ಕಾಣುವ ಇವುಗಳು ಈಗ ಫ್ಯಾಷನ್ ಜಗತ್ತಿನಲ್ಲಿ ಜಾಗ ಗಿಟ್ಟಿಸಿಕೊಳ್ಳುತ್ತಿವೆ.

ಬನಾರಸಿ, ಕಾಂಜೀವರಂ, ಚಂದೇರಿ, ಭಾಗಲ್ಪುರಿ, ಅಸ್ಸಾಂ ಸಿಲ್ಕ್, ಬೊಮ್ಕಾಯ್ ಹೀಗೆ ಹಲವು ರೇಷ್ಮೆ ಸೀರೆ ಶೈಲಿಯಲ್ಲೇ ಈ ‘ಆರ್ಟ್ ಸಿಲ್ಕ್ ಸೀರೆ’ಗಳು ದೊರೆಯುತ್ತಿವೆ. ಬನಾರಸಿ ಆರ್ಟ್ ಸಿಲ್ಕ್ ಸೀರೆಯಲ್ಲಿ ಕಾಂಟ್ರಾಸ್ಟ್ ಬಣ್ಣಗಳಿದ್ದು, ಮುಘಲ್ ವಿನ್ಯಾಸದಿಂದ ಸ್ಫೂರ್ತಿ ಪಡೆದಿವೆ. ಉಡಲು ಭಾರವೆನಿಸುವ ಶುದ್ಧ ಬನಾರಸಿ ಸಿಲ್ಕ್ ಸೀರೆಗೆ ಹೋಲಿಸಿದರೆ ಇವು ಹಗುರ ಹಾಗೂ ಮೃದುವಾಗಿರುತ್ತದೆ.

ಅಪ್ಪಟ ಕಾಂಜೀವರಂ ಸೀರೆಯನ್ನೇ ಹೋಲುವ ಸೀರೆಗಳೂ ಈಗ ಸಿಗುತ್ತಿವೆ. ಕಾಂಜೀವರಂ ಸೀರೆಯನ್ನೇ ಹೋಲುವಂತೆ ಸಾಂಪ್ರದಾಯಿಕ ನೋಟವಿದ್ದು, ಇವುಗಳಲ್ಲಿ ದೇಗುಲದ ಮಾದರಿಗಳು, ಪಟ್ಟೆಗಳು, ವಿಶಿಷ್ಟವಾದ ದಕ್ಷಿಣ ಭಾರತ ವಿನ್ಯಾಸಗಳನ್ನು ಕಾಣಬಹುದು. ಚಾಂದೇರಿ ಕೃತಕ ರೇಷ್ಮೆ ಸೀರೆಗಳನ್ನು ಪಾರ್ಟಿಗಳು ಹಾಗೂ ಸಮಾರಂಭಗಳಿಗೆ ಉಡಬಹುದು. ನವಿಲು, ಹೂವಿನ ವಿನ್ಯಾಸದ ಈ ಸೀರೆಗಳು ಹಬ್ಬಗಳಿಗೂ ಒಪ್ಪುವಂಥದ್ದೇ. ಮೀನಿನ ವಿನ್ಯಾಸದ ಅಂಚನ್ನು ಹೊಂದಿರುವ ಬೊಮ್ಕಾಯ್ ಕೃತಕ ರೇಷ್ಮೆ ಸೀರೆಯಂತೂ ಕಣ್ಸೆಳೆಯುವಂತಿರುತ್ತವೆ. ಭಾಗಲ್ಪುರಿ, ಅಸ್ಸಾಂ ಆರ್ಟ್ ಸಿಲ್ಕ್ ಸೀರೆಗಳು ಒಂದಕ್ಕೊಂದು ಚೆಂದ ಎನ್ನುವಂತೆ ಕಾಣುತ್ತವೆ.



## 'ಆರ್ಟ್ ಸಿಲ್ಕ್' ಜನಪ್ರಿಯತೆ ಹಿಂದೆ...

ಅಂದ ಹಾಗೆ ಈ ಕೃತಕ ರೇಷ್ಮೆ ಸೀರೆಗಳು ಏಕೆ ಜನಪ್ರಿಯವಾಗುತ್ತಿವೆ ಎನ್ನುವುದಕ್ಕೆ ಬಹುಮುಖ್ಯ ಕಾರಣ ಇವುಗಳ ಬೆಲೆ. ಪರಿಶುದ್ಧ ರೇಷ್ಮೆ ಸೀರೆಯ ಉತ್ಪಾದನಾ ವೆಚ್ಚಕ್ಕೆ ಹೋಲಿಸಿದರೆ ಈ ಕೃತಕ ರೇಷ್ಮೆ ಸೀರೆಗಳ ಉತ್ಪಾದನಾ ವೆಚ್ಚ ಕಡಿಮೆಯಿದೆ. ಶುದ್ಧ ರೇಷ್ಮೆ ಸೀರೆಯನ್ನು ರೇಷ್ಮೆ ಹುಳುವಿನಿಂದ ತೆಗೆದ ನೂಲಿನಿಂದ ತಯಾರಿಸಲಾಗುತ್ತದೆ. ನೇಯುವಿಕೆ ಒಳಗೊಂಡಂತೆ ಹಲವು ರೀತಿಯ ಪ್ರಕ್ರಿಯೆಗಳನ್ನು ಇದು ಒಳಗೊಂಡಿರುತ್ತದೆ. ಆದರೆ ಕೃತಕ ನೂಲುಗಳನ್ನು ಬಳಸಿ ತಯಾರಿಸಿದ ಸೀರೆಗಳಿಗೆ ಇವುಗಳ ಅಗತ್ಯವಿಲ್ಲ. ಹೀಗಾಗಿ ಉತ್ಪಾದನಾ ವೆಚ್ಚ ಕಡಿಮೆಯಿದ್ದು, ಈ ಸೀರೆಗಳ ಬೆಲೆಯೂ ರೇಷ್ಮೆಗೆ ಹೋಲಿಸಿದರೆ ಅತಿ ಕಡಿಮೆಯಿರುತ್ತದೆ.

ಕೈಗೆಟುಕುವ ದರದಲ್ಲಿ ರೇಷ್ಮೆ ಸೀರೆಯಂಥ ಲುಕ್ ಸಿಗುತ್ತದೆ ಎಂದಾದರೆ ಯಾರು ಮೆಚ್ಚುವುದಿಲ್ಲ ಹೇಳಿ? ರೇಷ್ಮೆ ಸೀರೆಯ ತದ್ರೂಪವನ್ನೇ ಕಾಟನ್ ಸೀರೆಯ ಬೆಲೆಗೆ ಕೊಂಡುಕೊಳ್ಳಬಹುದು ಎಂದರೆ ಖುಷಿಯಾಗುವುದಿಲ್ಲವೇ? ಇದೇ ಈ ಕೃತಕ ರೇಷ್ಮೆ ಸೀರೆಗಳ ವ್ಯಾಪಕ ಜನಪ್ರಿಯತೆಗೆ ಕಾರಣ.

ಹಗುರ ಹಾಗೂ ಮೃದುವಾಗಿರುವುದರಿಂದ ಉಡಲು ಆರಾಮದಾಯಕ. ಮೊದಲ ಬಾರಿ ಸೀರೆ ಉಡುವವರಂತೂ ಗೋಜಿಲ್ಲದೇ ತೊಡಬಹುದು. ಯಾವುದೇ ಕಾಲದಲ್ಲೂ ಯೋಚಿಸದೇ ಉಡಬಹುದು. ಸೀರೆ ಉಟ್ಟು ಎಷ್ಟು ಹೊತ್ತಾದರೂ ಭಾರ ಎನಿಸುವುದಿಲ್ಲ. ಮೊದಲೇ ಹೇಳಿದಂತೆ ಈ ಸೀರೆಗಳ ನಿರ್ವಹಣೆ ಬಗ್ಗೆಯೂ ತಲೆಕೆಡಿಸಿಕೊಳ್ಳುವಂತಿಲ್ಲ. ರೇಷ್ಮೆ ಸೀರೆಗಳ ಹಾಗೆ ಇವುಗಳನ್ನು ಕಾಳಜಿ ಮಾಡಬೇಕಾದ ಅಗತ್ಯವಿಲ್ಲ. ಬೇಗ ಬಣ್ಣಗುಂದುವುದಿಲ್ಲದ್ದರಿಂದ ಜೋಪಾನವಾಗಿ ಇಡಬೇಕೆಂಬ ಉಸಾಬರಿಯೂ ಇಲ್ಲ. ಹೊಳಪು ಕೂಡ ರೇಷ್ಮೆಯಂತೆಯೇ ಇರುವುದರಿಂದ ಅಂದ ಚೆಂದಕ್ಕೇನೂ ಕೊರತೆಯಿಲ್ಲ.

ಆದರೆ ಅಚ್ಚ ರೇಷ್ಮೆ ಸೀರೆಗೂ, ಕೃತಕ ರೇಷ್ಮೆ ಸೀರೆಗೂ ಒಂದು ಭಿನ್ನತೆ ಎದ್ದು ಕಾಣುತ್ತದೆ. ರೇಷ್ಮೆ ಸೀರೆಯಲ್ಲಿ ರೇಷ್ಮೆ ನೂಲಿನಿಂದ ಮಾಡಿದ ವಿನ್ಯಾಸ ಸೀರೆಯ ಹಿಂದೆಯೂ ಗೋಚರಿಸಿದರೆ, ಕೃತಕ ರೇಷ್ಮೆ ಸೀರೆಯಲ್ಲಿ ಇದು ಕಾಣೆಯಾಗಿರುತ್ತದೆ. ಅದೇನೇ ಇದ್ದರೂ ಕೈಗೆಟುಕುವ ದರದಲ್ಲಿ, ಎಲ್ಲಾ ಸಮಾರಂಭಕ್ಕೂ ಒಪ್ಪುವಂಥ, ಶ್ರೀಮಂತ ನೋಟ ನೀಡಬಲ್ಲ ಸೀರೆಯನ್ನು ಬಯಸುವ ಯುವತಿಯರು ಈ ಕೃತಕ ರೇಷ್ಮೆ ಸೀರೆಗಳೆಡೆಗೆ ಮನಸೋಲುವುದರಲ್ಲಿ ಎರಡು ಮಾತಿಲ್ಲ. ■